**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ**

**ಕ್ರಿಮೀನಲ್ ಮೊಕದ್ದಮೆ ನಂ. 731/2020.**

**ಚಾಸಾ- 13**

**ಪ್ರಾಸಾ-05**

**ದಿನಾಂಕಃ 29-09-2025 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು .**

ಹೆಸರು : ಮಂಜುನಾಥ ತಂಃ ಹೊನ್ನಪ್ಪ ಶೆಟ್ಟಿ

ವಯಸ್ಸು : 45 ವರ್ಷ

ಉದ್ಯೋಗ : ಪೊಲೀಸ್ ಪೇದೆ, ವೃತ್ತ ನಿರೀಕ್ಷಕರ ಕಚೇರಿ, ದಾಂಡೇಲಿ

ವಾಸ : ದಾಂಡೇಲಿ.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ.**

1) ನಾನು 2018 ರಿಂದ ಇಲ್ಲಿಯ ವರೆಗೆ ದಾಂಡೇಲಿಯ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2) ದಿಃ 12-04-2020 ರಂದು ಮದ್ಯಾಹ್ನ 04-15 ಗಂಟೆಗೆ ನನ್ನ ಮೇಲಾಧಿಕಾರಿಯಾದ ಚಾಾ-5 ರವರು ನನ್ನನ್ನು ಹಾಗೂ ಚಾಸಾ-28 ರವರನ್ನು ಕರೆದು ರೆಡ್ ಮಾಡಲು ತಮಗೆ ಚಾಸಾ-4 ರವರು ಅವರ ಕಚೇರಿಗೆ ಬರಲು ಹೇಳಿದ್ದಾರೆಂದು ಹೇಳಿ, ನಮ್ಮನ್ನು ಕರೆದುಕೊಂಡು ಚಾಸಾ-4 ರವರ ಕಚೇರಿಗೆ ಹೋದರು.

3) ಅಲ್ಲಿ ಹಳಿಯಾಳ ಪೊಲೀಸ್ ಠಾಣೆಯ ಪಿ.ಎಸ್.ಐ ಚಾಸಾ-7 ರವರು ತಮ್ಮ ಸಿಬ್ಬಂದಿಯೊಂದಿಗೆ ಹಾಗೂ ದಾಂಡೇಲಿ ಗ್ರಾಮೀಣ ಪೊಲೀಸ್ ಠಾಣೆಯ ಪಿ.ಎಸ್.ಐ ಆದ ಚಾಸಾ-8 ರವರು ತಮ್ಮ ಸಿಬ್ಬಂದಿಯೊಂದಿಗೆ ಅದೇ ಕಚೆರಿಯಲ್ಲಿದ್ದರು. ನಂತರ ಚಾಸಾ-4 ರವರು ನಮ್ಮನೆಲ್ಲಾ ಕರೆದುಕೂಂಡು ರಾಮನಗರ ಪೊಲೀಸ್ ಠಾಣೆಗೆ ಹೋದರು. ಅಲ್ಲಿ ಸದರಿ ಠಾಣೆಯ ಪಿ.ಎಸ್.ಐ ಚಾಸಾ-1 ರವರು ತಮ್ಮ ಸಿಬ್ಬಂದಿಯೊಂದಿಗೆ ಮತ್ತು ಜೊಯಿಡಾ ವೃತ್ತ ನಿರೀಕ್ಷಕರಾದ ಚಾಸಾ-6 ರವರು ತಮ್ಮ ಸಿಬ್ಬಂದಿಯೊಂದಿಗೆ ಅದೇ ಠಾಣೆಯಲ್ಲಿದ್ದರು.

4) ನಂತರ ಚಾಸಾ-4 ರವರು ತಮ್ಮ ಸಿಬ್ಬಂದಿಯ ಮೂಲಕ ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆಯಿಸಿ, ನಮ್ಮನೆಲ್ಲಾ ಕುರಿತು ರಾಮನಗರದ ಅನಮೋಡ ಹತ್ತಿರ ರಾಮಾ ನಾಯ್ಕ ಎಂಬ ಒಬ್ಬ ವ್ಯಕ್ತಿ ಅನಧಿಕೃತವಾಗಿ ಸರಾಯಿ ಮಾರಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ಬಂದಿದ್ದು, ಅದರಂತೆ ದಾಳಿ ಮಾಡುವ ಅವಶ್ಯಕತೆ ಇರುವ ಬಗ್ಗೆ ತಿಳಿಸಿ, ನಮ್ಮನೆಲ್ಲಾ ಕರೆದುಕೊಂಡು ಸಂಜೆ 05-30 ಕ್ಕೆ ಠಾಣೆಯಿಂದ ಹೊರಟು ಸಂಜೆ 06-20 ಕ್ಕೆ ಮಾಹಿತಿ ಬಂದ ಪ್ರಕಾರ ಘಟನಾ ಸ್ಥಳಕ್ಕೆ ತಲುಪಿದೆವು.

5) ಅಲ್ಲಿ ಚಾಸಾ-4 ರವರು ಕೆಲವು ಸಿಬ್ಬಂದಿಗಳನ್ನು ಮನೆಯ ಸುತ್ತಮುತ್ತ ನಿಲ್ಲಿಸಿದರು ಮತ್ತು ಚಾಸಾ-1, ಚಾಸಾ-5 ಮತ್ತು ನನ್ನನ್ನು ಹಾಗೂ ಇನ್ನೀತರ ಸಿಬ್ಬಂದಿಗಳನ್ನು ಕರೆದುಕೊಂಡು ಸದರಿ ವ್ಯಕ್ತಿಯ ಮನೆಯ ಒಳಗೆ ಹೋದೆವು. ಸದರಿ ಮನೆಯಲ್ಲಿದ್ದ ವ್ಯಕ್ತಿಯನ್ನು ವಿಚಾರಿಸಿದಾಗ, ತನ್ನ ಹೆಸರು ರಾಜಾರಾಮ ನಾಯ್ಕ ಎಂದು ಹೇಳಿದ್ದು, ಆದರೆ ಚಾಸಾ-4 ರವರು ಕೇಳಿದ ಪ್ರಶ್ನೆಗಳಿಗೆ ಸಮರ್ಪಕ ಉತ್ತರಿಸಲು ತಡವರಿಸಿದ್ದರಿಂದ ಚಾಸಾ-4 ರವರು ಸದರಿ ಮನೆಯನ್ನು ಮತ್ತು ಸುತ್ತಮುತ್ತಲಿನ ಸ್ಥಳವನ್ನು ಪರೀಕ್ಷಿಸಲು ಆದೇಶಿಸಿದರು.

6) ಸದರಿ ಆದೇಶದಂತೆ ಪರಿಶೀಲನೆ ಮಾಡಿದಾಗ, ಮನೆಯ ಹಿಂದಿನ ಕಂಪೌಂಡ ಹತ್ತಿರ ಗಿಡ-ಗಂಟೆಗಳ ನಡುವೆ ತಪ್ಪಲುಗಳಿಂದ ಮುಚ್ಚಿದ ವಸ್ತುಗಳು ಕಂಡುಬಂದವು. ಅದನ್ನು ತೆಗೆದು ಪರಿಶೀಲನೆ ಮಾಡಿದಾಗ, ಅದರಲ್ಲಿ 8 ರಟ್ಟಿನ ಬಾಕ್ಸ್ ಗಳು ಇರುವುದು ಕಂಡುಬಂದಿತು. ಸದರಿ 8 ರಟ್ಟಿನ ಬಾಕ್ಸ್ ಗಳ ಬಗ್ಗೆ ವಿಚಾರಿಸಿದಾಗ, ಸದರಿ ಬಾಕ್ಸ್ ಗಳಲ್ಲಿ ಗೋವಾ ಸರಾಯಿ ಇದ್ದು, ಅದನ್ನು ಹೆಚ್ಚಿನ ಲಾಭಕ್ಕಾಗಿ ಮಾರಾಟ ಮಾಡುತ್ತಿರುವುದಾಗಿ ಹೇಳಿರುತ್ತಾನೆ.

7) ನಂತರ ಸದರಿ 8 ರಟ್ಟಿನ ಬಾಕ್ಸ್ ಗಳನ್ನು ತೆರೆಲಾಯಿತು. ಅವುಗಳಲ್ಲಿ

a) ಮೊದಲನೇ ಬಾಕ್ಸನಲ್ಲಿ 750 ಎಂ.ಎಲ್ ನ ರಿಯಲ್ ವಿಸ್ಕಿಯ 9 ಬಾಟಲಿಗಳು

b) 2 ರಿಂದ 6ನೇ ಬಾಕ್ಸಗಳಲ್ಲಿ 750 ಎಂ.ಎಲ್ ನ ರಾಯಲ್ ಸ್ಟ್ಯಾಂಗ್ ವಿಸ್ಕಿಯ ತಲಾ 12 ಬಾಟಲಿಗಳು

c) 7ನೇ ಬಾಕ್ಸನಲ್ಲಿ 750 ಎಂ.ಎಲ್ ನ ರಾಯಲ್ ಸ್ಟ್ಯಾಂಗ್ ವಿಸ್ಕಿಯ 1 ಬಾಟಲಿ ಇದ್ದವು. ಸದರಿ ಕೊನೆಯ ಬಾಕ್ಸನಲ್ಲಿ ಉಳಿದ ಬಾಟಲಿಗಳನ್ನು ಮಾರಾಟ ಮಾಡಿರುವುದಾಗಿ ಹೇಳಿದನು.

d) ಕೊನೆಯ ಬಾಕ್ಸನಲ್ಲಿ 180 ಎಂ.ಎಲ್ ನ ಓಲ್ಡ್ ಬಿಲ್ ವಿಸ್ಕಿಯ ತಲಾ 48 ಬಾಟಲಿಗಳು ಇದ್ದವು.

8) ನಂತರ ಚಾಸಾ-1 ರವರು ಚಾಸಾ-4 ರವರ ಆದೇಶದಂತೆ ಸಂಜೆ 06-40 ರಿಂದ 09-30 ರ ವರೆಗೆ ಪಂಚನಾಮೆ ಜರುಗಿಸಿ, ಎಲ್ಲಾ ಅಕ್ರಮ ಮದ್ಯವನ್ನು ಜಪ್ತುಮಾಡಿ, ಅವುಗಳಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಪ್ರತಿ ಬಾಕ್ಸನಿಂದ ತಲಾ 2 ಬಾಟಲಿಗಳನ್ನು ಮತ್ತು ಕೇವಲ ಒಂದೇ ಇದ್ದ ಬಾಟಲಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು, ಅವುಗಳನ್ನು ಬಳಿ ಬಟ್ಟೆಯಿಂದ ಸುತ್ತಿ, ದಾರದಿಂದ ಕಟ್ಟಿ , ನಮ್ಮ ಸಹಿ ಇರುವ ಚೀಟಿಗಳನ್ನು ಅಂಟಿಸಿ, ಅರಗಿನಿಂದ ಸೀಲ್ ಮಾಡಲಾಯಿತು .

9) ನಂತರ ಸದರಿ ಅಕ್ರಮ ಮದ್ಯವನ್ನು ಗೋವಾದಿಂದ ತರಲು ಬಳಸಿದ ವಾಹನವನ್ನು ತೋರಿಸಿದ್ದು, ಅದರ ನಂಃ ಜಿಎ-01/ಇ-2397 ಓಮಿನಿ ವಾಹನವನ್ನು ಅದನ್ನು ಸಹ ಅದೇ ಸಮಯದಲ್ಲಿ ಜಪ್ತುಪಡಿಸಿಕೊಂಡಿರುತ್ತಾರೆ.

10) ನಂತರ ಚಾಸಾ-1 ರವರು ಸರಕಾರದ ವತಿಯಿಂದ ದೂರನ್ನು ನೀಡಿರುತ್ತಾರೆ ಮತ್ತು ಆರೋಪಿತನ ವಿರುದ್ದ ಕ್ರಮ ಕೈಗೊಂಡಿರುತ್ತಾರೆ. ನಂತರ ಚಾಸಾ-31 ರವರು ವಿಚಾರಣೆ ಮಾಡಿದಾಗ, ನಾನು ಹೇಳಿಕೆಯನ್ನು ನೀಡಿರುತ್ತೇನೆ.

11) ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಹಾಜರಾತಿ ವಿನಾಯತಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಆರೋಪಿಯನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇಲ್ಲ. ಆರೋಪಿಯನ್ನು ಗುರುತಿಸಲಾಗಿದೆ ಎಂದು ಪರಿಗಣಿಸಲಾಯಿತು.

12) ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ ಇರುವ 750 ಎಂ.ಎಲ್ ನ 13 ಬಾಟಲಿಗಳು ಹಾಗೂ 180 ಎಂ.ಎಲ್ ನ 2 ಬಾಟಲಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿರುತ್ತದೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ಎಸ್. ಜೆ. ವಕೀಲರಿಂದ</u>**

13) ನಾವು ಆ ದಿನ ದಾಂಡೇಲಿಯಿಂದ ಸಿಂಗರಗಾಂವ, ಜಗಲಪೇಟ ಮಾರ್ಗವಾಗಿ ರಾಮನಗರಕ್ಕೆ ಹೋಗಿರುತ್ತೇವೆ. ಆರೋಪಿಯ ಮನೆಯ ಮುಂದೆಯೇ ಆನಮೋಡ ಚೆಕ್ ಪೋಸ್ಟ್ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸುಮಾರು 300 ಮೀಟರ್ ಅಂತರದಲ್ಲಿರುತ್ತದೆ ಎಂದು ನುಡಿಯುತ್ತಾರೆ.

14) ಆನಮೋಡ ಚೆಕ್ ಪೋಸ್ಟ್ ನಲ್ಲಿ ನಿಂತು ನೋಡಿರೆ ಆರೋಪಿಯ ಮನೆ ಸ್ಪಷ್ಟವಾಗಿ ಕಾಣುತ್ತದೆ ಎಂದರೆ ಸರಿ. ಆರೋಪಿಯ ಮನೆಯ ಮುಂದೆ ಸೇಲ್ಸ ಟ್ಯಾಕ್ಸ ಕಚೇರಿ ಇದೆ ಎಂದರೆ ನನಗೆ

ಗೊತ್ತಿಲ್ಲ. ಆರೋಪಿ ತನ್ನ ಮನೆಗೆ ಗೋವಾದಿಂದ ಬರಬೇಕಾದರೆ ಮೊಲಂ ಹಾಗೂ ಅನಮೋಡ ಚೆಕ್ ಪೊಸ್ಟ್ ಗಳನ್ನು ದಾಟಿ ಬರಬೇಕು ಎಂದರೆ ಸರಿ. ಸಾಕ್ಷಿಯ ಮುಂದುವರೆದು ಅನಮೋಡ ಚೆಕ್ ಪೊಸ್ಟ್ ಬಗ್ಗೆ ಮಾತ್ರ ಗೊತ್ತು ಎಂದು ನುಡಿಯುತ್ತಾರೆ

15) ಅದೇ ರೀತಿ ಅನಮೋಡ ಚೆಕ್ ಪೊಸ್ಟ್ ನಂತರ ಕರ್ನಾಟಕ ರಾಜ್ಯದ ಹದ್ದಿನಲ್ಲಿ ಆರ್.ಟಿ.ಓ ಕಚೇರಿ ಇದ್ದು, ಅಲ್ಲಿಯೂ ಸಹ ಅನಮೋಡ ಪೊಲೀಸರು ಪರಿಶೀಲನೆ ಇರುತ್ತಾರೆ ಎಂದರೆ ಸರಿ. ಘಟನೆ ನಡೆದಿದೆ ಎನ್ನಲಾದ ದಿನ ಮತ್ತು ಸಮಯದಲ್ಲಿ ದೇಶಾದ್ಯಂತ ಲಾಕ್ ಡೌನ ಇತ್ತು ಎಂದರೆ ಸರಿ, ಆದ್ದರಿಂದ ಅನಮೋಡ ಚೆಕ್ ಪೊಸ್ಟ್ ನಲ್ಲಿ ಪರಿಶೀಲನೆಗಾಗಿ ರೆವಿನ್ಯೂ ಅಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳು ಇರುತ್ತಿದ್ದರು ಎಂದರೆ ಸರಿ.

16) ನಾವು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಸ್ಥಳ ಪಂಚನಾಮೆಗೆ ಸಹಿ ಮಾಡಿಲ್ಲ. ನಾವು ಯಾವುದೇ ಘಟನಾ ಸ್ಥಳಕ್ಕೆ ಹೋಗಿಲ್ಲ, ಆರೋಪಿಯ ಮನೆಯಿಂದ ಅಕ್ರಮ ಮದ್ಯವನ್ನು ಮತ್ತು ವಾಹನವನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ದಾಳಿ ನಡೆದಾಗ ವಿಡಿಯೋಗ್ರಾಪಿ ಮತ್ತು ಪೋಟೋಗ್ರಾಪಿ ಮಾಡಿಲ್ಲ.

17) ಆರೋಪಿಗೂ ಈ ಪ್ರಕರಣಕ್ಕೂ ಮತ್ತು ಅಕ್ರಮ ಮದ್ಯ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಅಧಿಕಾರಿಗಳ ಕೋರಿಕೆಯ ಮೇರೆಗೆ ನಮ್ಮ ಠಾಣೆಯ ಅಂಕಿ ಅಂಶಗಳಿಗೋಸ್ಕರ ಆರೋಪಿಗೆ ಈ ಅಕ್ರಮ ಮದ್ಯಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಆರೋಪಿಯ ವಿರುದ್ಧ ಸುಳ್ಳು ಪ್ರಕರಣದ ದಾಖಲಿಸಿ ಅದರ ಪ್ರಕಾರ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಸಹಿ ಇದೆ/-**

**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು,**
**ದಾಂಡೇಲಿ.**